**1 ನೇ ಹೆಚ್ಚುವರಿ  ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

ಸತ್ರ ಮೊಕದ್ದಮೆ  ನಂಃ **154/2023**

| | | |
|---|---|---|
| ಸಾಕ್ಷಿದಾರರ ಹೆಸರು | - ಇಮ್ತಿಯಾಜ್ | ಪಿಡಬ್ಲೂ - 03 |
| ತಂದೆಯ ಹೆಸರು | - ಖಲೀಲ್ | ಸಿಡಬ್ಲೂ - 02 |
| ವಯಸ್ಸು | - 40 ವರ್ಷ | |
| ಉದ್ಯೋಗ | - ಗಾರೆ ಕೆಲಸ | |
| ವಾಸ ಸ್ಥಳ | - ಬೇಲೂರು | |

ದಿನಾಂಕಃ 09.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಚಿಕ್ಕಮಗಳೂರಿನ ಜಿಲ್ಲಾ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ಆರೋಪಿ, ಮೃತ ಶಮಾಬಾನು, ಚಾಸಾ.1 ಮತ್ತು ಚಾಸಾ.3 ಗೊತ್ತು.

2. ಸುಮಾರು 3 ವರ್ಷಗಳ ಹಿಂದೆ ಕೊಲೆಯಾದ ಸಂಬಂಧ ಮಹಜರಿಗೆ ಬರುವಂತೆ ಪೊಲೀಸರು ನನಗೆ ಹೇಳಿದ್ದರು. ಆ ಕುರಿತು ನೋಟೀಸ್ ನೀಡಿದ್ದು, ಸದರಿ ನೋಟೀಸನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ನೋಟೀಸನ್ನು ನಿಪಿ.12 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು.

3. ಆರೋಪಿ ಬಾಡಿಗೆಗೆ ಇದ್ದ ಕ್ರಿಶ್ಚಿಯನ್ ಕಾಲೋನಿಯ ಮನೆಯಲ್ಲಿ ಪಂಚನಾಮೆಯನ್ನು ಮಾಡಲಾಗಿತ್ತು. ಚಾಸಾ.1 ರವರು ಸ್ಥಳವನ್ನು ತೋರಿಸಿದ್ದರು. ಅಲ್ಲಿ ಪೊಲೀಸರು ಒಂದು ಸುತ್ತಿಗೆ, ಒಂದು ವೈರ್, ಒಂದು ದಿಂಬು, ಒಂದು ದಿಂಬಿನ ಕವರ್, ಒಂದು ಬೆಡ್ ಶೀಟ್, ಗೋಡೆಯ ಮೇಲೆ ಇದ್ದ ರಕ್ತದ ಕಲೆಗಳನ್ನು ಕೆರೆದು ತೆಗೆದುಕೊಂಡರು. ನೆಲದ ಮೇಲೆ ಬಿದ್ದ ರಕ್ತದ ಕಲೆಗಳನ್ನು ಸಹ ತೆಗೆದುಕೊಂಡರು. ರಕ್ತವಿಲ್ಲದ ಜಾಗದಲ್ಲಿ ಮಣ್ಣನ್ನು ಕೆರೆದು ತೆಗೆದುಕೊಂಡರು.

4. ಸದರಿ ಮಹಜರನ್ನು ಸಾಯಂಕಾಲ 6.45 ರಿಂದ 8.45 ರ ತನಕ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾನು, ಚಾಸಾ.1 ಮತ್ತು 3 ರವರು ಸಹಿ ಮಾಡಿದ್ದೇವೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು. ನಿಪಿ.8 ರಲ್ಲಿ ನಾನು, ಚಾಸಾ.1 ಮತ್ತು 3 ರವರು ಇದ್ದೇವೆ. ರಕ್ತ ಬಿದ್ದಿದ್ದ ಜಾಗದಲ್ಲಿ ಫೋಟೋಗಳನ್ನು ತೆಗೆದಿದ್ದು, ಅವುಗಳನ್ನು ಈಗಾಗಲೇ ನಿಪಿ.4 ರಿಂದ ಪಿ.8 ಎಂದು ಗುರುತಿಸಲಾಗಿದೆ.

5. ಒಂದು ಸುತ್ತಿಗೆ, ಒಂದು ವೈರ್, ಒಂದು ದಿಂಬು, ಒಂದು ದಿಂಬಿನ ಕವರ್, ಒಂದು ಬೆಡ್ ಶೀಟ್‌ಗಳನ್ನು ಬೇರೆ ಬೇರೆ ಬಿಳಿ ಬಟ್ಟೆಗಳಲ್ಲಿ ಸುತ್ತಿ ತೆಗೆದುಕೊಂಡಿರುತ್ತಾರೆ. ರಕ್ತದ ಕಲೆಗಳನ್ನು ಮತ್ತು ಖಾಲಿ ಮಣ್ಣನ್ನು ಖಾಕಿ ಕವರಿಗೆ ಹಾಕಿ ತೆಗೆದುಕೊಂಡಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸಬಲ್ಲೆ. ಅವುಗಳ ಮೇಲೆ ನನ್ನ ಸಹಿಗಳು ಇರುತ್ತವೆ. ಸದರಿ ವಸ್ತುಗಳನ್ನು ಈಗಾಗಲೇ ಮು.ಮಾ.1 ರಿಂದ 9

ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ನನ್ನ ಸಹಿಗಳನ್ನು ಮು.ಮಾ.1(ಬಿ) ರಿಂದ ಮು.ಮಾ.9(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್. ವಕೀಲರಿಂದಃ-</u>

6. ನನ್ನ ಮನೆಯಿಂದ ಚಿಕ್ಕಮಗಳೂರು ಪೊಲೀಸ್ ಠಾಣೆ 40 ಕಿಮೀ ದೂರದಲ್ಲಿರುತ್ತದೆ. ನನ್ನ ಮನೆಯಿಂದ ಕ್ರಿಶ್ಚಿಯನ್ ಕಾಲೋನಿ 40 ಕಿಮೀ ದೂರದಲ್ಲಿರುತ್ತದೆ. ಚಾಸಾ.3 ನನ್ನ ಸಂಬಂಧಿಕ ಎಂದರೆ ಸರಿ. ಚಾಸಾ.13 ಸಹ ನನ್ನ ಸಂಬಂಧಿಕ ಎಂದರೆ ಸರಿ.

7. ನಾನು ಹಳೇಬೀಡಿನಲ್ಲಿದ್ದಾಗ ಪೊಲೀಸರು ನೋಟೀಸನ್ನು ಜಾರಿ ಮಾಡಿದ್ದರು. ಹಳೇಬೀಡಿನಿಂದ ಚಿಕ್ಕಮಗಳೂರು ಪೊಲೀಸ್ ಠಾಣೆಗೆ 40 ಕಿಮೀ ದೂರವಾಗುತ್ತದೆ. ಹಳೇಬೀಡಿನಿಂದ ಚಿಕ್ಕಮಗಳೂರಿಗೆ ಬರಬೇಕೆಂದರೆ 2 ಗಂಟೆ ದಾರಿ ಎಂದರೆ ಸರಿಯಲ್ಲ. ಒಂದು ಗಂಟೆ ದಾರಿಯಾಗುತ್ತದೆ. ಬಸ್ಸಿನಲ್ಲಿ ಬಂದಲ್ಲಿ 2 ಗಂಟೆಯಾಗುತ್ತದೆ ಎಂದರೆ ಸರಿ.

8. ಪೊಲೀಸರು ನನಗೆ ನೋಟೀಸ್ ಜಾರಿ ಮಾಡಿದಾಗ ಸಾಯಂಕಾಲ 4.30-5 ಗಂಟೆಯಾಗಿತ್ತು. ನಮ್ಮೂರಿಗೆ 2-3 ಜನ ಪೊಲೀಸರು ಬಂದಿದ್ದರು. ಆ ಸಂದರ್ಭದಲ್ಲಿ ಚಾಸಾ.1, ನಾನು ಮತ್ತು ಚಾಸಾ.3 ಇದ್ದೆವು. ಆ ಸಂದರ್ಭದಲ್ಲಿ ಪೊಲೀಸರು ನನಗೆ ಎಲ್ಲಾ ವಿಚಾರಗಳನ್ನು ಹೇಳಿದ್ದರು ಎಂದರೆ ಸರಿ. ಚಾಸಾ.1 ನಿಮಗೆ ಏನಾಗಬೇಕು ಎಂದು ಪೊಲೀಸರು ನಿಮ್ಮನ್ನು ಕೇಳಿಕೊಂಡರು ಎಂದರೆ ಸರಿ. ಸೈಯದ್ ಆಲಿಯನ್ನು ವಿಚಾರ ಮಾಡಿ ಎಲ್ಲವನ್ನು

ಬರೆದುಕೊಂಡು ಆತನ ಸಹಿ ಪಡೆದುಕೊಂಡರು ಎಂದರೆ ಸರಿ. ನಂತರ ನಾವು ಮತ್ತು ಆತನ ಕುಟುಂಬಸ್ಥರು ಎಲ್ಲರೂ ಪೊಲೀಸರ ಜೊತೆ ಬಂದೆವು ಎಂದರೆ ಸರಿ.

9. ಆ ಸಂದರ್ಭದಲ್ಲಿ ನಮ್ಮ ಜೊತೆ ಚಾಸಾ.4 ರಿಂದ 6, 9 ರಿಂದ 15 ಇದ್ದರು ಎಂದರೆ ಸರಿ. ಅದೇ ರೀತಿ ಚಾಸಾ.19 ಮತ್ತು 20 ಸಹ ಇದ್ದರು ಎಂದರೆ ಸರಿ. ಚಾಸಾ.1 ರವರು ಅವರಿಗೆ ಎಲ್ಲಾ ವಿಚಾರಗಳನ್ನು ತಿಳಿಸಿ ಕರೆಸಿದ್ದರು ಎಂದರೆ ಸರಿ. ನಾವೆಲ್ಲರೂ ನಮ್ಮ ವಾಹನಗಳಲ್ಲಿ ಪೊಲೀಸರ ಜೊತೆ ಬಂದೆವು ಎಂದರೆ ಸರಿ. ಬರುವಾಗ ನಾವೆಲ್ಲರೂ ಏನು, ಹೇಗೆ ಮಾಡಬೇಕು ಎನ್ನುವುದನ್ನು ಚರ್ಚಿಸಿದ್ದೆವು ಎಂದರೆ ಸರಿ. ಆ ಸಂದರ್ಭದಲ್ಲಿ ಚಾಸಾ.38 ರವರು ಸಹ ಇದ್ದರು ಎಂದರೆ ಸರಿ. ಅವರು ನಮ್ಮ ಸಮಕ್ಷಮದಲ್ಲಿ ಚಾಸಾ.1 ರವರ ಸಹಿ ಪಡೆದರು ಎಂದರೆ ಸರಿ. ಸದರಿ ಪೇಪರಿನಲ್ಲಿ ಪ್ರಿಂಟ್ ಆಗಿತ್ತು ಎಂದರೆ ಸರಿ.

10. ಚಾಸಾ.1 ನನ್ನ ಗೆಳೆಯ. ನಿಪಿ.1 ರಲ್ಲಿರುವ ಸಹಿ ಚಾಸಾ.1 ರವರ ಸಹಿ ಎಂದರೆ ಸರಿ. ಠಾಣೆಗೆ ಬಂದಾಗ ಟಿ.ವಿ. ರವರನ್ನು ಕರೆಸಬೇಕು ಎಂದು ಪ್ರಸ್ತಾಪ ಮಾಡಿದ್ದೆವು ಎಂದರೆ ಸರಿ. ಅಲ್ಲಿ ಚಾಸಾ.38 ರವರು ನಮ್ಮ ಸಹಿ ಪಡೆದುಕೊಂಡರು ಎಂದರೆ ಸರಿ. ಠಾಣೆಯಲ್ಲಿ ಪಡೆದಿರುವ ಸಹಿಯೇ ನಿಪಿ.3(ಬಿ) ಎಂದರೆ ಸರಿ. ಎಲ್ಲಾ ಸಹಿಗಳನ್ನು ಅಲ್ಲೇ ಪಡೆದಿದ್ದರು ಎಂದರೆ ಸರಿ. ಮುದ್ದೆಮಾಲುಗಳ ಮೇಲೆ ಸಹಿಗಳನ್ನು ಠಾಣೆಯಲ್ಲೇ ಮಾಡಿದ್ದೆನು ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಾಡಿದ್ದೆನು.

11. ಪೊಲೀಸ್ ಠಾಣೆಗೆ ಹೋದಾಗ ನಮ್ಮ ಹೆಸರು, ತಂದೆಯ ಹೆಸರು, ವಿಳಾಸ ಎಲ್ಲವನ್ನು ಪೊಲೀಸರು ಬರೆದುಕೊಂಡು ಎಲ್ಲೆಲ್ಲಿ ಬೇಕು ಅಲ್ಲಲ್ಲಿ ನಮ್ಮ ಸಹಿ ಪಡೆದುಕೊಂಡರು ಎಂದರೆ ಸರಿ. ನಾವು ಚರ್ಚೆ

ಮಾಡಿ ಪ್ರಸ್ತಾಪ ಮಾಡಿದಂತೆ ಟಿ.ವಿ. ರವರನ್ನು ಕರೆಸಿದ್ದೆವು ಎಂದರೆ ಸರಿ.

12. ಕ್ರಿಶ್ಚಿಯನ್ ಕಾಲೋನಿ ಎಲ್ಲಿ ಎಂದು ಬರವಣಿಗೆಯಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ನಿಪಿ.3 ರ ಎಲ್ಲಾ ಬರವಣಿಗೆಯನ್ನು ನನಗ ಈಗ ಹೇಳಲು ಬರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ವಿಷಯಗಳನ್ನು ಹೇಳಿ ಬರೆಸಿಲ್ಲ. ಸಂಬಂಧಿಕರ ಸಹಿ ಬೇಕು ಎಂದು ಹೇಳಿದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ.

13. ನಾನು ಸ್ಥಳಕ್ಕೆ ಹೋಗಿದ್ದೆ, ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದರು ಮತ್ತು ಮು.ಮಾ.1 ರಿಂದ 9 ಗಳನ್ನು ಜಪ್ತು ಮಾಡಿಕೊಂಡಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಕ್ರಿಶ್ಚಿಯನ್ ಕಾಲೋನಿ ಎನ್ನುವುದು ಚಿಕ್ಕಮಗಳೂರು ನಗರ ಪ್ರದೇಶದ ಒಳಗೆ ಬರುತ್ತದೆ ಎಂದರೆ ಸರಿ. ಸದರಿ ಪ್ರದೇಶದ ಅಕ್ಕಪಕ್ಕದಲ್ಲಿ ಸಾಕಷ್ಟು ವಾಸದ ಮನೆಗಳು, ಅಂಗಡಿ ಮುಗ್ಗಟ್ಟುಗಳು ಇವೆ ಎಂದರೆ ಸರಿ. ಅಲ್ಲಿಗೆ ನಾವು ಹೋಗುವ ಕಾಲಕ್ಕೆ ಸುಮಾರು 50 ಜನರು ಸೇರಿದ್ದರು. ಅಲ್ಲಿ ಸೇರಿದ್ದ ಜನರನ್ನು ಪೊಲೀಸರು ನಮ್ಮ ಸಮಕ್ಷಮ ವಿಚಾರಣೆ ಮಾಡಿರುವುದಿಲ್ಲ. ನಾನು ಸ್ಥಳೀಕನಲ್ಲದ್ದರಿಂದ ನನಗೆ ಅಲ್ಲಿನ ವಿಧ್ಯಮಾನಗಳ ಕುರಿತು ಗೊತ್ತಿಲ್ಲ ಎಂದರೆ ಸರಿ.

14. ಅಲ್ಲಿಂದ ಉಪ್ಪಳ್ಳಿ ಎಷ್ಟು ದೂರವಾಗುತ್ತದೆ ಎಂದು ನನಗೆ ಗೊತ್ತಿಲ್ಲ. ಅಲ್ಲಿ ಸುತ್ತಮುತ್ತಲಿನಲ್ಲಿ ಮತ್ತು ಆ ಮನೆಯಲ್ಲಿ ಯಾರು ವಾಸವಾಗಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಫೋಟೋಗಳನ್ನು ಉಪ್ಪಳ್ಳಿಯಲ್ಲಿ ತೆಗೆದಿದ್ದು ಮತ್ತು ಕ್ರಿಶ್ಚಿಯನ್ ಕಾಲೋನಿಯಲ್ಲಿ ಅಲ್ಲ ಎಂದರೆ ಸರಿಯಲ್ಲ. ಕ್ರಿಶ್ಚಿಯನ್ ಕಾಲೋನಿಯ ಅಕ್ಕಪಕ್ಕ ಯಾವ

ಕಾಲೋನಿಗಳು ಬರುತ್ತವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಕ್ರಿಶ್ಚಿಯನ್ ಕಾಲೋನಿಯ ಬಗ್ಗೆ ಯಾವುದೇ ಮಾಹಿತಿ ನನಗೆ ಇಲ್ಲ.

15. ಪೊಲೀಸರು ನನಗೆ ಈ ದಿವಸ ಎಲ್ಲವನ್ನು ಓದಿ ಹೇಳಿದ್ದರು ಎಂದರೆ ಸರಿ. ಚಾಸಾ.1 ಇವತ್ತು ಬಂದಿರುತ್ತಾರೆ ಎಂದರೆ ಸರಿ. ಅವರು ಓದಿ ಹೇಳಿದ ಪ್ರಕಾರ ನಾನು ಹೇಳುತ್ತಿದ್ದೇನೆ ಎಂದರೆ ಸರಿ. ಬೇರೆ ಮಾಹಿತಿ ನನಗೆ ಇಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿಕ್ಕಮಗಳೂರು.

ಸಾಕ್ಷಿಯ ಸಹಿ